**ಸಾಕ್ಷಿಗೆ ದಿನಾಂಕ : *08-01-2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ವಾದಿಯ ಪರ ಶ್ರೀ. ಪಿ ಆರ್ ಎಸ್ ವಕೀಲರಿಂದ:**

ಪ್ಲಾಟ್ ನಂ.11 ಮತ್ತು 11 ಎ ಇವುಗಳನ್ನು ಗಂಗವ್ವ ರವರು ಮಾರಾಟ ಮಾಡಿದ್ದು, ಅವರಿಗೆ ಮಾಲ್ಕಿ ಹಕ್ಕು ಇರದೇ ಇದ್ದರು ಖೊಟ್ಟಿಯಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ವ್ಯವಹಾರವು ನಾಮ ಮಾತ್ರ ಖರೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ಲಾಟ್ ನಂ.11, 11 ಎ ಮತ್ತು 14 ಇವುಗಳು ಮೃತ ರುದ್ರಪ್ಪ ರವರು ಖರೀದಿ ಹಿಡಿದ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೆ ನಂ.317/2 ಮತ್ತು 317/1 ಇವುಗಳನ್ನು ಭೂ-ಪರಿವರ್ತನೆ ಮಾಡಿದ್ದು, ಅದಕ್ಕೆ ಎಷ್ಟು ಖರ್ಚು ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಭೂ-ಪರಿವರ್ತನೆಯನ್ನು ವೀರುಪಾಕ್ಷಪ್ಪ ಗೋಕಾವಿ ಮತ್ತು ಬಸವರಾಜ ಗೋಕಾವಿ ರವರು ಮಾಡಿರುತ್ತಾರೆ. ಭೂ-ಪರಿವರ್ತನೆಯನ್ನು ವೀರುಪಾಕ್ಷಪ್ಪ ಗೋಕಾವಿ ಮತ್ತು ಬಸವರಾಜ ಗೋಕಾವಿ ರವರು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈರಪ್ಪ ಮತ್ತು ಅವರ ಹೆಂಡತಿ ಗಂಗವ್ವ ಸೇರಿಕೊಂಡು ಜಂಟಿ ಮೃತ್ಯು ಪತ್ರವನ್ನು ಮಾಡಿರುವ ಬಗ್ಗೆ ನನಗೆ ತಿಳಿದಿರುತ್ತದೆ. ನಾನು ಜಂಟಿ ಮೃತ್ಯು ಪತ್ರವನ್ನು ನೋಡಿರುವುದಿಲ್ಲ. ಜಂಟಿ ಮೃತ್ಯು ಪತ್ರದಲ್ಲಿ ನಮೂದಿಸಿರುವ ಆಸ್ತಿಗಳು ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿ ಮತ್ತು 13 ರಿಂದ 16 ನೇ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಈರಪ್ಪ ಮತ್ತು ಗಂಗವ್ವ ರವರಿಗೆ ಜಂಟಿ ಮೃತ್ಯು ಪತ್ರವನ್ನು ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಈರಪ್ಪ ಮತ್ತು ಗಂಗವ್ವ ಜಂಟಿ ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಮನೆ ಮತ್ತು 6 ಎಕರೆ ಹೊಲಕ್ಕೆ ಸಂಬಂಧಪಟ್ಟಂತೆ ಜಂಟಿ ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನಗೆ ಜಂಟಿ ಮೃತ್ಯು ಪತ್ರದ ಬಗ್ಗೆ ಗೊತ್ತಿರುವುದಿಲ್ಲ ಮತ್ತು ಯಾವ ಆಸ್ತಿಗಳ ಬಗ್ಗೆ ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎಂದು

ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಈರಪ್ಪ ಮತ್ತು ಗಂಗವ್ವ ರವರು ಜಂಟಿಯಾಗಿ ಮೃತ್ಯು ಪತ್ರವನ್ನು ಮಾಡಿದ್ದು, ಈರಪ್ಪ ರವರು ತೀರಿಕೊಂಡಿದ್ದು, ಗಂಗವ್ವ ರವರು ಜೀವಂತ ಇರುವುದರಿಂದ, ಸದರಿ ಮೃತ್ಯು ಪತ್ರವು ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಸಮಾಜದ ಪ್ರಕರಣಗಳಲ್ಲಿ ಮತ್ತು ವೈಯಕ್ತಿಕ ಪ್ರಕರಣಗಳಲ್ಲಿ ಸಾಕ್ಷ್ಯ ಕೊಡಲು ಬರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಹಿಸ್ಸಾ ಬರುತ್ತದೆ ಎಂದರೆ ಸರಿಯಲ್ಲ. ವಾದಿಯರಿಗೆ ಹಿಸ್ಸಾ ಇದ್ದರೂ ಕೂಡಾ 6 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಪ್ರತಿವಾದಿ ನಂ.2 ಮತ್ತು 3 ರವರ ಮದುವೆಯನ್ನು ಚೆನ್ನಬಸಪ್ಪ ರವರು ತಮ್ಮ ಖರ್ಚಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಈರಪ್ಪ ಮತ್ತು ಚೆನ್ನಪ್ಪ ರವರು ಕೂಡಿ ಮದುವೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. 1995 ರಲ್ಲಿ ಆದ ಪಾಲು ವಾಟ್ನಿ ಪತ್ರಕ್ಕೆ ವಾದಿಯರ ತಾಯಿ ಬಸಮ್ಮ ಮತ್ತು ಈರಣ್ಣ ಸಹಿ ಮಾಡಿರುತ್ತಾರೆ. ಸದರಿ ಪಾಲು ವಾಟ್ನಿ ಪತ್ರಕ್ಕೆ ವಾದಿಯರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಾಲು ವಾಟ್ನಿ ಪತ್ರವನ್ನು 6 ನೇ ಪ್ರತಿವಾದಿಯು ಹಾಜರುಪಡಿಸಿರುವ ಬಗ್ಗೆ ಗೊತ್ತಿರುವುದಿಲ್ಲ. ಚೆನ್ನಪ್ಪ ರವರು ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ಹೇಗೆ ವಾರಸುದಾರರು ಆಗುತ್ತಾರೆಯೋ ಹಾಗೆ ಚೆನ್ನಬಸಪ್ಪ ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ದಾವಾ ಆಸ್ತಿಗಳಿಗೆ ವಾರಸುದಾರರು ಆಗುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮಾಡಲು 13 ರಿಂದ 16 ನೇ ಪ್ರತಿವಾದಿಯರ ಪರ ವಕೀಲು ಸಮಯ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.